ಬಹುಮಾನ ಪಡೆದುಕೊಂಡು ಬಂದಿದ್ದರು. ಮಹಾರಾಜರ ಜೀಪಿನಲ್ಲಿ ಪಯಣಿಸುವುದೆಂದರೆ ಮಹಾರಾಣಿಯವರಿಗೂ ರೂಢಿಯಾಗಿ ಹೋಗಿತ್ತು. ಏಳು ಸುತ್ತಿನ ಕೋಟೆ ದಾಟಿ ಬಂದಾಗ ಸುತ್ತ ಹಸಿರು ತುಂಬಿದ ಕಬ್ಬು, ತೆಂಗು, ಬಾಳೆ, ಪೇರಲ, ಚಿಕ್ಕು ತೋಟಗಳಿಂದ ಭೂರಮೆ ಶೃಂಗಾರಗೊಂಡಿದ್ದಳು. ಕುದುರೆಯ ಜಾಡು ಹಿಡಿದು ಹೊರಟ ಮಹಾರಾಜರು ದಾರಿಯಲ್ಲಿ ಸಿಕ್ಕವರನ್ನೆಲ್ಲ 'ಕುದುರೆ ಕಂಡೀರಾ, ನಮ್ಮ ವಾಡೆ ಕುದುರೆ ಕಂಡೀರಾ?' ಎಂದು ಕೇಳುತ್ತಿದ್ದರು. ಇಳೆಮಾವು ಕಾಲುವೆ ಬಳಿ ನೀರು ಕುಡಿಯಲು ಕುದುರೆಯೊಂದು ಹವಣಿಸುತ್ತಿದ್ದುದನ್ನು ಕಂಡಿದ್ದ ಒಬ್ಬ ರೈತ ಮಹಾರಾಜರಿಗೆ ನಿಖರ ಮಾಹಿತಿಯನ್ನು ನೀಡಿದಾಗ ಮಹಾರಾಜರು ತಮ್ಮ ಜೀಪು ಇಳಿದು ಮಹಾರಾಣಿಯವರೊಂದಿಗೆ ಕಾಲ್ನಡಿಗೆಯಲ್ಲಿಯೇ ಪಯಣ ಬೆಳೆಸಿದರು. ಮಹಾರಾಜರೊಂದಿಗೆ ಅಲ್ಲಲ್ಲಿ ಕೆಲಸ ಮಾಡುತ್ತಿದ್ದ ರೈತರೂ ಸೇರಿಕೊಂಡರು.

***

ಇತ್ತ ಪೂರ್ವಾಭಿಮುಖವಾಗಿ ಸಾಗಿದ್ದ ಶಾಲಾ ಸೈನ್ಯ ಯಾವ ವಾಹನಗಳಿಗೂ ಮೊರೆ ಹೋಗದೆ ಕಾಲ್ನಡಿಗೆಯಿಂದಲೇ ತಮ್ಮ ಪಥ ಸಂಚಲನದಿಂದ ರವಿಪುರ, ಕಡೇಗೊಳ್ಳ, ವೀರಭದ್ರ ಊರುಗಳನ್ನು ದಾಟಿ ಅರ್ಧ ದಾರಿ ಸವೆಸಿದ್ದರು. ಕಂಡ ಕಂಡ ಎಮ್ಮೆ, ಆಕಳು, ಕತ್ತೆ ಒಂದೂ ಬಿಡದೆ ಎಲ್ಲ ಪ್ರಾಣಿಗಳನ್ನು ಜಾಲಾಡಿದರೂ 'ಯಾಗದ ಕುದುರೆ' ಕಣ್ಣಿಗೆ ಕಾಣಲಿಲ್ಲ. ಅಲ್ಲಲ್ಲಿ ಬೀದಿ ತಿರುಗಿ ಹುಲ್ಲು ಮೇಯುತ್ತಿದ್ದ ಹೆಳವರ ಕುದುರೆಗಳನ್ನು, ಕುರಿಗಳೊಂದಿಗೆ ಕುದುರೆ ಸಾಕಿಕೊಂಡಿದ್ದ ಚಿಕ್ಕೋಡಿ ಭಾಗದ ಕುರಿಗಾರರ ಕುದುರೆಗಳನ್ನು ಸ್ವತಃ ಮುಟ್ಟಿ ನೋಡಿ ಇದು ತಮ್ಮದಲ್ಲವೆಂದು ಖಾತ್ರಿ ಮಾಡಿಕೊಂಡು ಮುಂದೆ ಸಾಗಿದರು.


***

ಮಹಾರಾಜರು ಮಾಹಿತಿ ಸಂಗ್ರಹ ಮಾಡಿಕೊಂಡು ಕಾಲ್ನಡಿಗೆ ಬಿಟ್ಟು ಮತ್ತೆ ಜೀಪು ಹತ್ತಿದರು. ಈ ಬಾರಿ ಅವರಿಗೆ ಹಸುರಸಿರಿ ಕಡಿಮೆಯಾಗಿ ಗರಸು ಮಣ್ಣಿನ ಮತ್ತು ಅಲ್ಲಲ್ಲಿ ಶೇಂಗಾ ಬೆಳೆದ ಹೊಲಗಳು ಹತ್ತಿದವು. ಜೀಪಿನ ಪ್ರಯಾಣವನ್ನು ಅವರು ಮುಖ್ಯ ರಸ್ತೆ ಬಿಟ್ಟು ಒಳದಾರಿಯಲ್ಲಿ ಮುಂದುವರೆಸಿದರು. ಹೊಲಗಳ ಒಡ್ಡು ಏರಿ ಇಳಿದು ಅವರ ಜೀಪು ಪಯಣಿಸತೊಡಗಿತು. ಅಲ್ಲಲ್ಲಿ ಗುಡಿಸಲವಾಸಿಗಳು ಮೂಡಗಲ್ಲು ಸಂಸ್ಥಾನದ ರಾಜದಂಪತಿಗಳು ತಮ್ಮ ಬಳಿ ಬಂದಿರುವುದನ್ನು ಕಂಡು ಹೌಹಾರಿ ಹರ್ಷಚಿತ್ತರಾದರು. ಬಂದ ಸಂಗತಿಯನ್ನು ಮಹಾರಾಜರು ಅರುಹಿ ಕುದುರೆ ಇರುವಿಕೆಯ ಬಗ್ಗೆ ಕೇಳಿದರು. ಈ ಹೊತ್ತಿಗೆ ನೆತ್ತಿಯ ಮೇಲೆ ಬಂದ ಸೂರ್ಯ ತನ್ನ ಸುಡುಬಿಸಿಲಿನಿಂದ ಮಹಾರಾಣಿಯವರಿಗೆ ತೀವ್ರ ಆಯಾಸವನ್ನುಂಟು ಮಾಡಿದನು. ಗುಡಿಸಲ ಬಳಿಯ ಬೇವಿನ ಮರದ ತಂಪಿನಲ್ಲಿ ವಿಶ್ರಮಿಸಿಕೊಂಡು ಮಹಾರಾಣಿಯವರು ರೈತಾಪಿ ಜನರ, ಸಾಮಾನ್ಯ ಸರಳ ಬದುಕನ್ನು ಕಂಡು ತುಂಬಾ ಖುಷಿ ಅನುಭವಿಸಿದರು.

***

ಪ್ರಖರ ಸುಡುಬಿಸಿಲಿನಲ್ಲಿ ಸೋತು ಸುಣ್ಣವಾಗಿ ಹೋಗಿದ್ದ ಇತ್ತ ಕೇಂದ್ರ ಸೈನ್ಯ ಯಾಗದ ಕುದುರೆಯ ಅನ್ವೇಷಣೆಗೆ ಬರುವಾಗ ಪೂರ್ವ ತಯಾರಿಯಿಲ್ಲದೆ, ಹುಂಬು ನಿರ್ಣಯದಿಂದ ಬಂದಿದ್ದ ಕಾರಣವಾಗಿ ಕುಡಿಯಲು ನೀರು, ತಿನ್ನಲು ಆಹಾರ ಜೊತೆಯಲ್ಲಿ ತಂದಿರಲಿಲ್ಲ. ಹೊತ್ತೇರಿದಂತೆ ಹೊಟ್ಟೆಯ ಹಸಿವು ಜಾಸ್ತಿಯಾಗಿ ಕಣ್ಣಲ್ಲಿ ಚುಕ್ಕೆ ಮೂಡಿ ತಮ್ಮ ಆಹಾರದ ಕುರಿತು ಚಿಂತಿಸತೊಡಗಿದರು. ತದಲಬಾಗಿ ಲಕ್ಕವ್ವ ನಮ್ಮ ಹೊಟ್ಟೆ ತುಂಬಸ ಎಂದು ಬೇಡಿಕೊಂಡರು. ಸಮೀಪದಲ್ಲಿಯೇ ಗೊಡದಳ್ಳಿ ಇರುವುದಾಗಿಯೂ ಅಲ್ಲಿ ಹಳ್ಳಿ ಹೋಟೆಲ್ ಒಂದರಲ್ಲಿ ಸಿಕ್ಕಷ್ಟು ತಿಂದರಾಯ್ತೆಂದು ಹೊಟ್ಟೆಯ ಹಸಿವಿನಿಂದ ದಿಕ್ಕು ಬದಲಿಸಿ ಗೊಡದಳ್ಳಿ ಕಡೆಗೆ ಹೆಜ್ಜೆ ಹಾಕಿದರು.

ರಾಜ ದಂಪತಿ ಪಯಣ ಸುಡುಬಿಸಿಲು ಲೆಕ್ಕಿಸದೆ ಮುಂದುವರೆದಿತ್ತು. ಒಮ್ಮೆ ಜೀಪಿನಲ್ಲಿ ಮಗದೊಮ್ಮೆ ಕಾಲ್ನಡಿಗೆಯಲ್ಲಿ ಸಾಗುತ್ತಾ ಕುದುರೆಯ ಅನ್ವೇಷಣೆಯಲ್ಲಿ



ತೊಡಗಿದ್ದ ಸಂಸ್ಥಾನದ ಈ ಕುಟುಂಬಕ್ಕೆ ಹುಚ್ಚು ನಾಯಿಯೊಂದರ ರೌದ್ರಾವತಾರ ದರ್ಶನವಾಯಿತು. ನಾಯಿ ಕಚ್ಚುವ ರೀತಿಯಲ್ಲಿ ಮಹಾರಾಜರ ಮೈಮೇಲೆ ಏರಿ ಬರುವುದು ಮಹಾರಾಜರಿಗೆ ಸಹಿಸಿಕೊಳ್ಳಲಾಗಲಿಲ್ಲ. ರಾಣಿಯವರ ಪಿತ್ತ ನೆತ್ತಿಗೇರಿತು. ಜೀವದ ಮೇಲಿನ ಭಯದಿಂದ ಮಹಾರಾಜರು ಹಾರಿಸಿದ ಬಂದೂಕಿನ ಗುಂಡಿಗೆ ನಾಯಿಯು ಬ್ರಹ್ಮಾಂಡ ವ್ಯಾಪಿಸುವ ಹಾಗೆ ಚೀರಿ ಹೊಕ್ಕ ಗುಂಡನ್ನು ಹೊಟ್ಟೆಯಲ್ಲಿಟ್ಟುಕೊಂಡು ಸುರಿಯುವ ರಕ್ತವನ್ನು ಲೆಕ್ಕಿಸದೇ ಓಡತೊಡಗಿತು. ಅದುವರೆಗೂ ತಮ್ಮ ಪಾಡಿಗೆ ತಾವು ದೂರದಲ್ಲಿ ಹೊಲಗದ್ದೆಗಳಲ್ಲಿ ಕೆಲಸ ಮಾಡಿಕೊಂಡಿದ್ದ ರೈತಾಪಿ ಜನ ಈ ಗುಂಡಿನ ಸಪ್ಪಳ ಮತ್ತು ನಾಯಿಯ ಚೀರಾಟಕ್ಕೆ ಬೆಚ್ಚಿಬಿದ್ದು ಕೊಡಲಿ ಬಡಿಗೆಗಳೊಂದಿಗೆ ಓಡಿ ಬಂದರು. ಸ್ವತಃ ಮೂಡಗಲ್ಲು ರಾಜದಂಪತಿಗಳನ್ನು ಕಂಡ ಅವರು ಈ ಹುಚ್ಚುನಾಯಿ ಬಹಳ ದಿನಗಳಿಂದ ನಮಗೆಲ್ಲಾ ಕಾಡುತ್ತಿದ್ದು, ನಮಗೆಂದು ಸಿಗಲಿಲ್ಲ, ನಿಮ್ಮ ಕೈಯಲ್ಲಿ ಸಿಕ್ಕು ಅವಸಾನವಾಗಿದ್ದು ನಾವೆಲ್ಲಾ ನೆಮ್ಮದಿಯಿಂದ ಇರುವಂತಾಯಿತು ಎಂದು ಕೃತಜ್ಞತೆ ಹೇಳಿದರು. ಸತ್ತೆನೋ ಬಿದ್ದೆನೋ ಎಂದು ಓಟ ಕಿತ್ತಿದ ನಾಯಿಯ ಚೀರಾಟ ನಿಧಾನಕ್ಕೆ ಸ್ತಬ್ಧವಾಯಿತು, ರಾಜ ದಂಪತಿ ಪಯಣಕ್ಕೆ ಜೀಪು ಮುನ್ನಡೆಯಿತು.

***

ಒಂದೆಡೆ ನೆತ್ತಿ ಸುಡುವ ಉರಿಬಿಸಿಲು, ಖಾಲಿ ಹೊಟ್ಟೆಯಲ್ಲಿ ಕಂಗಾಲಾಗಿದ್ದ ಕೇಂದ್ರ ಸೈನ್ಯಕ್ಕೆ ಊರುಗೋಲು ಎಂಬಂತೆ ಒಂದು ಗುಡಿಸಲು ಸಿಕ್ಕಿತು. ಒಳಹೊಕ್ಕು ನೋಡಿದಾಗ ಮುದುಕಿಯೊಬ್ಬಳು ಕಬ್ಬಿಣದ ಮಂಚದ ಮೇಲೆ ಒರಗಿದ್ದಳು. ಮನೆಯ ಇತರೆ ಸದಸ್ಯರು ದುಡಿಯಲಿಕ್ಕೆ ಹೊರಗೆ ಹೋಗಿದ್ದರು. ಹಾಕಿ ಮಾಸ್ತರರು ಗುಡಿಸಲಿನಲ್ಲಿ ಹಣುಕಿ ಹಾಕಿ 'ಎಮ್ಮಾ ನಾವು ಮಾಸ್ತರ ಅದೀವು, ದೂರದಿಂದ ಬಂದೇವು. ನಮ್ಮ ಕುದುರೆ ಕಳಕೊಂಡಿತ್ತು, ಹುಡುಕಿಕೊಂಡು ಬಂದೇವ, ಈ ಕಡೆ ಏನಾರ ಬಂದೀತೇನ' ಎಂದು ವಿಚಾರಿಸಿದರು. ಸರಿಯಾಗಿ ಕಣ್ಣು ಕಾಣದ, ಕಿವಿಯೂ ಕೇಳದ ಮುದುಕಿಗೆ ಯಾರು ಬಂದು ಏನು ಹೇಳಿದರು ಎಂದು ತಿಳಿಯದೆ ನಿದ್ದೆಗಣ್ಣಿಂದ ಎದ್ದು, ಕಣ್ಣು ಪಿಳಿ ಪಿಳಿ ಬಿಡತೊಡಗಿತು. ಇದು ಇತರ ಮಾಸ್ತರರಿಗೆ ಅರ್ಥವಾಯಿತು. ಮುದುಕಿಗೆ ನಾವು ಏನೇ ಹೇಳಿದರೂ ತಿಳಿಯುವುದಿಲ್ಲ ಎಂದು ಖಾತ್ರಿ ಮಾಡಿಕೊಂಡು, ಕೈ ಸನ್ನೆ, ಬಾಯಿ ಸನ್ನೆ ಮಾಡಿ ಕುಡಿಯಲು ನೀರು ಕೇಳಿದರು. 'ಆಯ್ತು.. ಆಯ್ತು ಎಂದು ಮುದುಕಿ ಅವರಿಗೆ ಕೂಡ್ರಲು ಹೇಳಿ ಸೀದಾ ಇನ್ನೊಂದು ಗುಡಿಸಲಿಗೆ ಹೋಗಿ ಒಂದು ಗಡಗಿ, ಒಂದು ಗ್ಲಾಸು ತಂದು ಮುಂದಿಟ್ಟಳು. ಹೋ.. ಅಜ್ಜಿ ಮಜ್ಜಿಗಿ ತಂದಾಳ ಎಂದು ತಿಳಿದು ಕಬ್ಬಡ್ಡಿ ಮಾಸ್ತರು ಎತ್ತಿ ಸುರುವಿಕೊಂಡು ಗ್ಲಾಸು ಬಾಯಿಗೆ ಹಚ್ಚಿದಾಗಲೇ ಗೊತ್ತಾಗಿದ್ದು, ಇದು ಮಜ್ಜಿಗೆ ಅಲ್ಲ ಸೇಂದಿ ಎಂದು. ಥೂ...ಥೂ ಎಂದು ಉಗುಳುತ್ತಾ 'ಏನಬೇ ಮುದುಕಿ ನೀನು ನೀರ ಕೇಳಿದ್ರ ಮಜ್ಜಿಗಿ ಕೊಟ್ಟಿ ಅಂತಾ ಮಾಡಿದ್ವಿ, ನೀ ನೋಡಿದರ ಈ ಹೊಲಸ ಸೆರೆ ಕುಡಿಯಾಕ ಕೊಟ್ಟೆಯಲ್ಲ' ಎಂದು ಗ್ಲಾಸು ಇಟ್ಟು ಮಾರುದೂರ ಜಿಗಿದು ನಿಂತರು. ಈ ಎಲ್ಲ ಸನ್ನಿವೇಶಗಳನ್ನು ದೂರದಲ್ಲಿ ಮರದ ಮೇಲೆ ಹುಣಸೇಕಾಯಿ ಹರಿಯುತ್ತಿದ್ದ ದಢೂತಿ ಆಸಾಮಿ ಒಬ್ಬ ನೋಡಿ ಕೆಳಗಿಳಿದು ಬಂದು, 'ರೀ